ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 03–11–2020

# ಪತ್ರಿಕಾ ಪ್ರಕಟಣೆ

## ಪಟಾಕಿಗಳನ್ನು ಹಚ್ಚುವ ಸಂದರ್ಭದಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಸುರಕ್ಷತಾ ಕ್ರಮಗಳು

ಬೆಂಗಳೂರು, ನವೆಂಬರ್ 03 (ಕರ್ನಾಟಕ ವಾರ್ತೆ): 2020ರ ನವೆಂಬರ್ ಮಾಹೆಯಲ್ಲಿ ಆಚರಿಸುವ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಪಟಾಕಿ ಹಚ್ಚುವಾಗ ಕೆಲವು ಮುಂಜಾಗ್ರತಾ ಕ್ರಮಗಳ ತೆಗೆದುಕೊಳ್ಳಬೇಕಾಗಿ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಸೂಚಿಸಿದೆ.

ಮಕ್ಕಳಿಗೆ ದೊಡ್ಡವರ ಸಮ್ಮುಖದಲ್ಲಿ ಪಟಾಕಿ ಹಚ್ಚಲು ತಿಳಿಸತಕ್ಕದ್ದು. ತೆರೆದ ಪ್ರದೇಶದಲ್ಲಿ ಪಟಾಕಿ ಹಚ್ಚುವುದು ಸುರಕ್ಷಿತ. ಯಾವುದೇ ಸಂದರ್ಭದಲ್ಲಿ ಮನೆಯೊಳಗೆ ಪಟಾಕಿ ಹಚ್ಚಬಾರದು. ಆದಷ್ಟು ಮಟ್ಟಿಗೆ ಶರೀರಕ್ಕೆ ಹೊಂದಿಕೊಳ್ಳುವಂತಹ ಬಟ್ಟೆಗಳನ್ನು ಧರಿಸತಕ್ಕದ್ದು. ಸುರ ಸುರ ಬತ್ತಿ ಇತ್ಯಾದಿಗಳನ್ನು ಶರೀರದಿಂದ ಆದಷ್ಟು ದೂರ ಹಿಡಿಯಬೇಕು. ಪಟಾಕಿ ಹಚ್ಚುವಾಗ ಅದರ ಮೇಲೆ ಬಾಗಬಾರದು. ಸಾಧ್ಯವಾದಷ್ಟು ಮಟ್ಟಿಗೆ ಪಕ್ಕದಿಂದ ಹಚ್ಚತಕ್ಕದ್ದು. ಯಾವುದೇ ಪಾತ್ರೆಯೊಳಗೆ ಅಥವಾ ಇಕ್ಕಟ್ಟಾದ ಸ್ಥಳಗಳಲ್ಲಿ ಪಟಾಕಿ ಹಚ್ಚಬಾರದು. ಪಟಾಕಿಗಳನ್ನು ಜೇಬಿನಲ್ಲಿಡಬಾರದು.

ಯಾವುದೇ ಸಂದರ್ಭದಲ್ಲಿ ಪಟಾಕಿಗಳನ್ನು ಬೆಂಕಿಯ ಅಥವಾ ಉಷ್ಣತೆ ಹೆಚ್ಚಿರುವ ಸ್ಥಳಗಳಲ್ಲಿ ಇಡಬಾರದು ಹಾಗೂ ಪೊಟ್ಟಣಗಳನ್ನು ತೆರೆಯಬಾರದು. ಹಚ್ಚಿರುವ ಪಟಾಕಿ ಸಿಡಿಯದಿದ್ದರೆ ಅದನ್ನು ಪುನರ್ ಪರೀಕ್ಷಿಸಲು ಪ್ರಯತ್ನಿಸಬಾರದು.

ಹೂ ಕುಂಡಗಳನ್ನು ಕೈಯಲ್ಲಿ ಹಿಡಿದುಕೊಂಡು ಹಚ್ಚಬಾರದು. ರಾಕೆಟ್‌ಗಳನ್ನು ಬಳಸುವುದನ್ನು ಪೂರ್ಣವಾಗಿ ತಪ್ಪಿಸುವುದು ಉತ್ತಮ. ಬೇರೆಯವರಿಗೆ ತೋರಿಸಿಕೊಳ್ಳಲು ಪಟಾಕಿ ಹಚ್ಚುವಾಗ ಅಪಾಯಕ್ಕೆ ಅವಕಾಶ ಕೊಡಬಾರದು. ಪಕ್ಕದಲ್ಲಿ ಯಾವಾಗಲೂ ನೀರನ್ನು ಇಟ್ಟುಕೊಳ್ಳುವುದು ಸುರಕ್ಷಿತ. ಆಕಸ್ಮಿಕವಾಗಿ ಸುಟ್ಟ ಗಾಯಗಳಾದರೆ ಕೂಡಲೇ ತಣ್ಣೀರನ್ನು ಸುರಿಯತಕ್ಕದ್ದು.

ಸಾಧ್ಯವಾದಷ್ಟು ಮಟ್ಟಿಗೆ ಸ್ನೇಹಿತರ ಜೊತೆ ಸೇರಿ ಸಾರ್ವಜನಿಕ ತೆರೆದ ಪ್ರದೇಶಗಳಲ್ಲಿ ಪಟಾಕಿ ಹಚ್ಚುವುದು ಸೂಕ್ತ.  ಇದರಿಂದ ಎಲ್ಲರೂ ಸಂತೋಷಪಡಬಹುದು ಹಾಗೂ ಸುರಕ್ಷಿತ.  ಮಕ್ಕಳು ವಯಸ್ಸಾದವರು, ಖಾಯಿಲೆ ಇರುವವರು ಹಾಗು ಪ್ರಾಣಿಗಳನ್ನು ಗಮನಿಸಿ, ಅವರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಪ್ರಯತ್ನಿಸಿ. ಹೆಚ್ಚು ಶಬ್ದ ಬರುವ ಪಟಾಕಿಗಳನ್ನು ಆಸ್ಪತ್ರೆ ಮತ್ತು ಇತರೆ ಸೂಕ್ಷ್ಮ ಪ್ರದೇಶಗಳಲ್ಲಿ ಬಳಸುವುದನ್ನು ತಪ್ಪಿಸಿ.

ದೇಶದಾದ್ಯಂತ ಹರಡಿರುವ ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಿ ಸುರಕ್ಷಿತ ದೀಪಾವಳಿ ಆಚರಿಸುವಂತೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## Celebrate Deepavali Festival Safely

**Bangalore, November 03 (Karnataka Information): To ensure an accident free Deepavali Festival-2020 Karnataka State Fire & Emergency Service Department suggests the following safety measures.**

**Allow the children to light fireworks only under the supervision of adult members.  Do not light fire crackers inside the house but light them in an open space away from combustible materials.**

**Never wear loose, flowing clothes while lighting fireworks.  Hold sparklers away from the body.  Never bend over the fireworks while lighting them.  Light them from the side.**

**Never light fireworks under confinement in a metal container. Never keep fire crackers in the pocket.  Never store fireworks or unpack them near a flame or source of heat.  Never return to fire work once lit-it may explode or your face.  Never light a flower pot holding it in hand.  While lighting rocket like crackers, take precaution that it does not enter into an open window, door, open building , hut etc., As for as possible avoid lighting of rockets. Never take unnecessary risk while lighting fireworks just to show off to your friends .**

**Keep a bucket of water handy while lighting firework and in case of any burn injury immediately pour clean water on the burned skin. Get all your friends together and pool in your fireworks and light them in an open space.  Have**

**some adult to supervise the display. This way you will be able to enjoy many more types of fireworks and it will also be safer and cheaper.**

**Do no light loud fireworks near aged, sick, animals and Hospitals. In case of any fire accident public are requested to inform fire control room Phone No. 101 in case of Bangalore City, apart from- 101, Phone No. 080-22971500 or 080-22971600 can be contacted**

**The guidelines laid down by the government for the COVID-19 disease that have spread throughout the country must be followed.**

## ಐ.ಎ.ಎಸ್ ಮತ್ತು ಕೆ.ಎ.ಎಸ್ ಪರೀಕ್ಷೆಗಳಿಗೆ ತರಬೇತಿ

**ಬೆಂಗಳೂರು, ನವೆಂಬರ್ 03 (ಕರ್ನಾಟಕ ವಾರ್ತೆ):**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗ ನಡೆಸಲಿರುವ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 60 ದಿನಗಳ ಆನ್‌ಲೈನ್ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.**

**ಆಸಕ್ತರು ದಿನಾಂಕ: 13.11.2020 ರೊಳಗಾಗಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಛೇರಿಯಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದೆಂದು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಲಿಂಗರಾಜ ಗಾಂಧಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 0821–2515944 ಈ ದೂರವಾಣಿ ಸಂಖ್ಯೆಯಲ್ಲಿ ಸಂಪರ್ಕಿಸಬಹುದಾಗಿದೆ.**

## ನೀರು ಪೂರೈಕೆಯಲ್ಲಿ ವ್ಯತ್ಯಯ

**ಬೆಂಗಳೂರು, ನವಂಬರ್ 03 (ಕರ್ನಾಟಕ ವಾರ್ತೆ)**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿನಾಂಕ: 04-11-2020 ರ ಮಧ್ಯಾಹ್ನ: 02:00 ಗಂಟೆಯಿಂದ 05-11-2020ರ ಬೆಳಗ್ಗೆ: 06:00 ಯವರೆಗೆ ವಿಜಯನಗರ ಓ.ಹೆಚ್.ಟಿ ಸೇವಾಠಾಣೆಯಡಿಯಲ್ಲಿ ಬರುವ ಮಾಗಡಿ ಮುಖ್ಯರಸ್ತೆಯಲ್ಲಿ ಹೊಸದಾಗಿ ಅಳವಡಿಸಲಾದ 600ಮಿ.ಮೀ ವ್ಯಾಸದ

ಎಂ.ಎಸ್ ಕೊಳವೆ ಮಾರ್ಗದ ಜೋಡಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಕೆಳಕಂಡ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಗೋವಿಂದರಾಜನಗರ, ಕಾವೇರಿಪುರ, ರಂಗನಾಥಪುರ, ಪ್ರಶಾಂತ್ ನಗರ, ಎಂ.ಸಿ ಬಡಾವಣೆ, ಮುನೇಶ್ವರ ನಗರ, ಬಿಡಿಎ ಬಡಾವಣೆ, ಕಾಮಾಕ್ಷಿಪಾಳ್ಯ, ಹೆಚ್.ವಿ.ಆರ್.ಬಡಾವಣೆ, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ವಿಜಯನಗರ, ಹಂಪಿನಗರ, ಟೆಲಿಕಾಮ್ ಬಡಾವಣೆ, ವಿಜಯನಗರ ಪೈಪ್ ಲೈನ್, ಸಿ.ಎಸ್.ಬಿ.ಎಸ್. ಬಡಾವಣೆ, ಮಾರೇನಹಳ್ಳಿ, ಚಂದ್ರಲೇಔಟ್‌ಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಮಂಡಳ ಪ್ರಕಟಣೆ ತಿಳಿಸಿದೆ.

## Disruption of water supply

**Bengaluru, November 03 (Karnataka Information):**

BWSSB is taking up the work linking and commissioning of newly laid 600mm dia MS line along Magadi main road coming under Vijaynagar OHT Service station from 04-11-2020 at 02:00 pm to 05-11-2020 upto 06:00am.

Hence, the water supply will be disrupted in Govindrajanagar, Kaveripura, Rangantapura, Prasahanthnagar, MC layout, Muneshwaranagar, BDA Layout, Kamakshiplaya, HVR layout, Syndicate Bank colony, Vijayanagar, Hampinagar, Telecom layout, Vijayanagar pipeline, CSBS layout, Marenahalli, Chandra layout says official Press Release.

## NATIONAL MEDIA AWARD FOR BEST CAMPAIGN ON VOTERS' EDUCATION AND AWARENESS-2020

**Bengaluru, November 03 (Karnataka Information):**

Election Commission of India invites entries from Media Houses for the National Media Award for best campaign on Voters' Education and Awareness during the year 2020. There shall be four Awards, one each for Print media, Television (Electronic), Radio (Electronic) and Online (Internet)/Social media.

The awards are to recognize the outstanding contributions by Media Houses to promote electoral participation by creating awareness about accessible elections, educating people about the electoral process and raising awareness among the general public about the relevance and importance of voting and registration.

The awards will be in the form of a citation and plaque and will be presented on the National Voters' Day (25th January 2021).

Criteria will be on Quality of Voter awareness campaign, Extent of coverage/quantity and Evidence of impact on the public. Any other relevant factor(s).

Conditions of Entry:

Entries must have been published or broadcast/telecast during the relevant period.

Print entries must include summary of the work carried out during the relevant period which should include number of news items/articles, total print area in sq cms. A PDF soft copy OR a link to relevant web address OR a full size photocopy/print copy of the newspaper/articles. Detail of any other activity like direct public engagement etc. Any other information must be included.

Broadcast Television (Electronic) and Radio (Electronic) entries must include:

A brief on the campaign/work carried out during the relevant period which should include Material (in a CD or DVD or Pen drive) with duration and frequency of broadcast/telecast and total time of such broadcast of each spot during the period. Sum of the total broadcast time for all spots/news. News features or programmes on Voter awareness in a CD or DVD or Pen drive or other digital media, along with duration, telecast/broadcast date and time and frequency.

Any other activity like direct public engagement etc. Any other information.

Online (Internet)/Social media entries must include:

Summary of the work carried out during the relevant period which should include number of posts/blogs/campaigns/tweets/articles etc. A PDF soft copy of concerned articles or a link to a relevant web address. Detail of any other activity like direct public engagement etc. Impact of online activity(details). Any other information.

Entries submitted in a language other than English/Hindi will require an accompanying English translation. Entries submitting broadcast material should be aware that Jury may use only the first ten minutes of features/programme. The Commission's decision will be final and no correspondence will be entered into. The Commission's reserves all the rights in this regard. Entries should carry the name, address, telephone and fax numbers and email of the Media House.

Entries must reach Shri Pawan Diwan, Under Secretary (Communication) Election Commission of India, Nirvachan Sadan,Ashoka Road, New Delhi 110001 before 20th Novemeber, 2020

Email: media.election.eci@gmail.com

pawandiwan@eci.gov.in Phone Number: 011-23052133

## ಅಧಿಸೂಚನೆ ರದ್ದು

**ಬೆಂಗಳೂರು, ನವೆಂಬರ್ 03 (ಕರ್ನಾಟಕ ವಾರ್ತೆ): ಕರ್ನಾಟಕ ಲೋಕಸೇವಾ ಆಯೋಗವು 25-11-2017 ರಲ್ಲಿ ಅಧಿಸೂಚಿಸಿರುವ ಹುದ್ದೆಗಳ ಅನುಕ್ರಮಣ ಸಂಖ್ಯೆ 1112-1604 ರಲ್ಲಿ ಅಧಿಸೂಚಿಸಲಾಗಿರುವ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಲ್ಲಿನ 493 ಆಶ್ರಮ ಶಾಲಾ ಶಿಕ್ಷಕರ ಹುದ್ದೆಗಳನ್ನು ತಿದ್ದುಪಡಿ ಮಾಡಿ ಇಲಾಖೆಯ ಕೋರಿಕೆಯ ಮೇರೆಗೆ ಹಿಂಪಡೆಯಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಬಾರದ ಲೋಕಕ್ಕೆ ಅಣ್ಣನ ಪಯಣ: ಟಿ.ಎಸ್.ನಾಗಾಭರಣ ಕಂಬನಿ

**ಬೆಂಗಳೂರು, ನವಂಬರ್ 03 (ಕರ್ನಾಟಕ ವಾರ್ತೆ)**
ರಂಗಭೂಮಿಗೆ ವಿಶೇಷ ಕೊಡುಗೆ ನೀಡಿರುವ ನನ್ನ ಪ್ರತೀ ಬೆಳವಣಿಗೆಯಲ್ಲಿ ಬಹುಮುಖ್ಯಪಾತ್ರ ನಿರ್ವಹಿಸಿದ್ದ ಹಿರಿಯಣ್ಣ ರಂಗಕರ್ಮಿ ಹೆಚ್.ಜಿ.ಸೋಮಶೇಖರ ರಾವ್ ಅವರ ನಿಧನ ಅತ್ಯಂತ ದುಃಖವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ರಂಗಕರ್ಮಿ ಟಿ.ಎಸ್.ನಾಗಾಭರಣ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

೧೯೭೦ರಿಂದ ಸುದೀರ್ಘ ೫೦ ವರ್ಷಗಳಿಂದಲೂ ರಂಗಭೂಮಿ, ಸಿನಿಮಾ ಕಿರುತೆರೆ ಸೇರಿದಂತೆ ಎಲ್ಲದರಲ್ಲೂ ಅವರ ಜೊತೆಗೆ ಹೆಜ್ಜೆ ಹಾಕಿದ್ದೇನೆ. ಎಂತಹ ಕ್ಲಿಷ್ಟ ಸನ್ನಿವೇಶದಲ್ಲೂ ಬೆನ್ನುಲುಬಾಗಿ ನಿಂತು ಬೆಂ

ಬಲ ವ್ಯಕ್ತಪಡಿಸುತ್ತಿದ್ದರು. ನನ್ನ ಬೆಳವಣಿಗೆಯನ್ನು ಹೃಯದಸ್ಪರ್ಶಿಯಾಗಿ ಖುಸಿಪಡುತ್ತಿದ್ದ ನನ್ನ ಅಣ್ಣ ಇಂದು ಬಾರದಲೋಕಕ್ಕೆ ಪಯಣಿಸಿರುವುದು ನನಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅ ತ್ಯಂತ ನೋವಿನ ವಿದಾಯವನ್ನು ವ್ಯಕ್ತಪಡಿಸಿದ್ದಾರೆ.

ಸಂಗ್ಯಾ-ಬಾಳ್ಯ ನಾಟಕದಲ್ಲಿ ಅವರ ತಮ್ಮನಾಗಿ ನಟನೆ ಮಾಡಿದ್ದು, ನಾವಿಬ್ಬರೂ ಅಣ್ಣ-ತಮ್ಮ ನಟನೆಯ ನಾಟಕ ಹಲವು ಯಶಸ್ವಿ ಪ್ರದರ್ಶನ ಕಂಡಿತ್ತು. ನಿಜ ಜೀವನದಲ್ಲಿಯೂ ನಾವಿಬ್ಬರೂ ಅಣ್ಣತಮ್ಮನಂತೆಯೇ ಬದುಕಿದವರು ಇಂದು ಅವರಿಲ್ಲದ ದಿನಗಳ ಬಗ್ಗೆ ಊಹಿಸಿಕೊಳ್ಳಲು ಕಷ್ಟವಾಗು ತ್ತಿದೆ ಎಂದು ನೋವಿನಿಂದ ಕಂಬನಿ ಮಿಡಿದಿದ್ದಾರೆ.

ನನ್ನ ವೈಯಕ್ತಿಕ ಬದುಕಿರಲೀ, ವೃತ್ತಿಯಲ್ಲಾಗಲೀ ತೊಂದರೆ ಎದುರಾದರೆ ತನ್ನದೇ ಸಮಸ್ಯೆ ಎಂ ಬಂತೆ ಪರಿಹಾರ ಸೂಚಿಸುವ ಜೊತೆಗೆ ತಾವೇ ಮುಂದೆ ನಿಂತು ಬಗೆಹರಿಸುತ್ತಿದ್ದ (ಅಣ್ಣ ಹೆಚ್.ಜಿ.ಸೋ ಮಶೇಖರ) ಸೋಮಣ್ಣ ಇನ್ನಿಲ್ಲ ಎಂಬ ಸುದ್ದಿ ಬರಸಿಡಿಲಿನಂತಾಗಿದೆ.

ಪಾಶ್ಚಿಮಾತ್ಯ ಮತ್ತು ಭಾರತೀಯ ನಾಟಕಕರ್ತೃಗಳ ಕೃತಿಗಳನ್ನು ರಂಗದ ಮೇಲೆ ಜೀವಂತಗೊ ಳಿಸಿದ ಸೋಮಶೇಖರ ರಾವ್ ಅವರು ೧೯೯೨-
೯೩ನೇ ಸಾಲಿನ ರಾಜ್ಯ ಸರ್ಕಾರದ ಅತ್ಯತ್ತಮ ಪೋಷಕ ನಟ ಪ್ರಶಸ್ತಿಯನ್ನು ಪಡೆದಿದ್ದರು. ಬ್ಯಾಂಕ್ ಉದ್ಯೋಗಿಯಾಗಿದ್ದುಕೊಂಡೇ ರಂಗಭೂಮಿ, ಸಿನಿಮಾ ಕ್ಷೇತ್ರಕ್ಕೆ ದೊಡ್ಡ ಮಟ್ಟದ ಕೊಡುಗೆ ನೀಡಿದವ ರು ಎಂದು ಶ್ಲಾಘಿಸಿದ್ದಾರೆ.

## ಕನ್ನಡ ಪುಸ್ತಕಕ್ಕೆ 50 ಶೇಕಡ ರಿಯಾಯಿತಿ

**ಬೆಂಗಳೂರು, ನವಂಬರ್ 03 (ಕರ್ನಾಟಕ ವಾರ್ತೆ):**

**ಕನ್ನಡ ರಾಜ್ಯೋತ್ಸವ ಅಂಗವಾಗಿ 2020ರ ನವೆಂಬರ್ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುವುದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.**

**ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ**

**ಸೌಲ**ಭ್ಯ ದೊರೆಯಲಿದೆ. ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ಆನ್‌ಲೈನ್‌ನಲ್ಲಿ ಕೂಡ ಈ ಶೇ. 50% ರಿಯಾಯಿತಿ ಲಭ್ಯವಿದೆ.